A.—Sri Kadidal MANJAPPA (Minister for Revenue and Public Works).—

	Major	*Minor*
(*a*) Hebbur Hobli	6	28
Gulur Hobli	8	17
Kottagere Hobli	3	18
Kunigal Kasaba Hobli	5	4
(*b*) Hebbur Hobli	..	3,288
Gulur Hobli	..	2,143
Kottagere Hobli	..	1,226
Kunigal Kasaba Hobli		3,845

(*c*) Nil in these particular hoblis.

(*d*) 160 units ; 792 acres.

(*e*) The restoration of this tank is being urged for the last six years. But the proposal is found to be not feasible on investigation.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಇಲ್ಲಿ ಕೊಟ್ಟಿರತಕ್ಕ ಮೈನರ್ ಕೆರೆಗಳ ನಂಬ್ಯೆ ಸರಿಯಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರತಕ್ಕ ವರದಿಯ ಪ್ರಕಾರ ಸರಿಯಾಗಿದೆ.

ಶ್ರೀ ಟಿ. ಎ೯. ಮೂಡಲಗಿರಿಗೌಡ.—5 ವರ್ಷಗಳಿಂದಲೂ ಯಾವ ಕೆರೆಯನ್ನೂ ರಿಪೇರಿಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೀರಿ. ಇದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟೊಂದು urgency ಇರಲಿಲ್ಲ. Urgency basis ಮೇಲೆ ಕೆರೆಗಳನ್ನು ನಾವು ಜೀರ್ಣೋದ್ಧಾರ ಮಾಡುತ್ತಿದ್ದೇವೆ. ಬಹುಶಃ ಈ ಹೋಬಳಿಯಲ್ಲಿರತಕ್ಕ ಕೆರೆಗಳನ್ನು ರಿಪೇರಿಮಾಡುವುದಕ್ಕಿಂತ ಬೇರೆ ಹೋಬಳಿಯಲ್ಲಿರತಕ್ಕ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು ಸೂಕ್ತವೆಂದು ಕಂಡುಬಂದಿದ್ದರಿಂದ, ಇದನ್ನು ಕೈಗೊಳ್ಳಲಿಲ್ಲವೆಂದು ಹೇಳಬಹುದು.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಇಂಜನಿಯರುಗಳ ಮನಸ್ಸಿಗೆ urgency ಇಲ್ಲವೆಂದು ತೋರಿತೋ ಅಥವಾ ಸರ್ಕಾರದ ಮೇಲೆ ಈ ವಿಷಯದಲ್ಲಿ ಹೆಚ್ಚಿಗೆ ಒತ್ತಾಯ ಬರಲಿಲ್ಲವೆಂದು ಹೀಗಾಯಿತೋ ?

ಶ್ರೀ ಕಡಿದಾಳ್ ಮಂಜಪ್ಪ.—ಒತ್ತಾಯವನ್ನು ಇದು ಅವಲಂಬಿಸುವುದಿಲ್ಲ. ಸ್ಥಳೀಯ ಎಂಜಿನಿಯರುಗಳ ಅಭಿಪ್ರಾಯದ ಮೇಲೆ ಹೋಗುತ್ತದೆ.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಸಾಮಾನ್ಯವಾಗಿ ಈ ಮೈನರ್ ಟ್ಯಾಂಕುಗಳಲ್ಲಿ ಯಾವ ಕೆರೆಗಳಲ್ಲೂ ವರ್ಷೇ ವರ್ಷೇ ಪೂರ್ತಿಯಾಗಿ ಫಸಲು ಬರುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿನ್ನೆ ದಿವಸವೇ ನಾನು ಹೇಳಿದ್ದೇನೆ, ಬಹಳ ಕೆರೆಗಳು ದುರಸ್ತಾಗಬೇಕಾಗಿವೆ. ಅವುಗಳನ್ನೆಲ್ಲಾ, urgency basis ಮೇಲೆ ಮಾಡುತ್ತಿದ್ದೇವೆ.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ತುಮಕೂರು ತಾಲ್ಲೂಕಿನಲ್ಲಿ ಎರಡು ಹೋಬಳಿಗಳಲ್ಲಿ ಪೂರ್ತಿಯಾಗಿ ಎಲ್ಲಾ ಕೆರೆಗಳೂ ದುರಸ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಒಬ್ಬರು ಹೋಬಳಿಯ ಒಂದು ಕೆರೆಯನ್ನೂ ಕೂಡ ರಿಪೇರಿಗೆ ತೆಗೆದು ಕೊಳ್ಳದಿರುವುದಕ್ಕೆ ಕಾರಣವೇನೆಂಬುದನ್ನು ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದ್ದೇನೆ.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಕೆಂಬಳಲು ಕೆರೆಯ capicity 160 ಯೂನಿಟ್ಸು ಎಂದೂ, 792 ಎಕರೆಗಳು ಅದರ ಹಿಂದೆ ಸಾಗುವಳಿಯಲ್ಲಿವೆಯೆಂದೂ ಹೇಳಿದ್ದೀರಿ. 160 ಯೂನಿಟ್ಸುಗಳಿಂದ 792 ಎಕರೆಗಳನ್ನು ಸಾಗುವಳಿಮಾಡುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆಗುತ್ತದೆ, according to the information we have received.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಇದರ ಜೀರ್ಣೋದ್ಧಾರದ ಬಗ್ಗೆ ಏನಾದರೂ ಏರ್ಪಾಡು ಮಾಡಿದ್ದೀರಾ ಎಂದು ಕೇಳಿದ್ದಕ್ಕೆ 'Not feasible' ಎಂದು ಹೇಳಿದ್ದೀರಿ. ಹಾಗಾದರೆ, ಇಲ್ಲಿ ಸಾಗುವಳಿಯನ್ನು ಯಾವ ರೀತಿ ಉತ್ತಮಪಡಿಸುವುದಕ್ಕೆ ಏರ್ಪಾಡು ಮಾಡಿದ್ದೀರಿ ?

Sri Kadidal MANJAPPA.—That is a separate question. It is repeated that the raising of the weir of the tank will submerge a large area of the valuable wet lands under Naguvalli tank.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಇದನ್ನು ಮುಚ್ಚಿಕೊಂಡಿರತಕ್ಕ ಹೂಳನ್ನು ತೆಗೆಯಿಸುವುದಕ್ಕೇನಾದರೂ ಏರ್ಪಾಡುಮಾಡುತ್ತೀರಾ ?

Sri Kadidal MANJAPPA.—That we will consider ; but it will be a costly affair.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಈಗಾಗಲೇ ಅನೇಕ ಕೆರೆಗಳಲ್ಲಿ ಹೂಳು ತೆಗೆಯುವುದು, ಜೀರ್ಣೋದ್ಧಾರ ಮಾಡುವುದು ಮುಂತಾದ ಕೆಲಸಗಳನ್ನು ಕೈಕೊಂಡಿದ್ದಾರೆ, ಇದಕ್ಕೂ ಅದೇ ಮಾರ್ಗವನ್ನನುಸರಿಸುವುದಕ್ಕಾಗುವುದಿಲ್ಲವೆ ?

Sri Kadidal MANJAPPA.—If feasible we will do it.

ಶ್ರೀ ಟಿ. ಎ೯. ಮೂಡಲಗಿರಿಗೌಡ.—ಮೈನರ್ ಕೆರೆಗಳನ್ನು ಈ ವರ್ಷ ರಿಪೇರಿಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಶಾಸನಸಭಾ ಸದಸ್ಯರು ಯಾವ ಯಾವ ಕೆಲಸಗಳನ್ನು ಮುಖ್ಯವಾಗಿ ತೆಗೆದುಕೊಳ್ಳಬಹುದೆಂದು ಪಟ್ಟಿಯನ್ನು ಕೊಟ್ಟರೆ, ಸಮಾಲೋಚನೆಮಾಡಿ, ಯಾವ ಯಾವುದನ್ನು ತೆಗೆದುಕೊಳ್ಳಬೇಕೆಂಬುದನ್ನು ಮಂತ್ರಿಮಂಡಲದಲ್ಲಿ ನಿರ್ಧಾರ ಮಾಡುತ್ತೇವೆ.

Repairing the Karanjee Tank in Chickmagalur Town.

Q.—681. Sri G. PUTTASWAMY (Chikmagalur-Mudigere—Scheduled Castes).—

Will the Government be pleased to State :—

(*a*) (i) the number of years that have elapsed since the old

(SRI G. PUTTASWAMY.)

Karanjee Tank which was supplying water to Chikmagalur Town and to thousands of acres of land in the neighbouring villages came to a state of disrepair;

(ii) the reason for not restoring this tank so far;

(iii) the capacity of the water of this tank?

A.—Sri Kadidal MANJAPPA (Minister for Revenue and Public Works).—

(*a*) About 35 years back, it was a water supply tank to Chikmagalur Town. Later on, this has been converted into an irrigation tank.

(*b*) The necessary protective works and repairs have been done during the years 1951-52 and 1952-53 with a cost of Rs. 1,226 against the sanctioned estimate of Rs. 2,800 for the said work.

(*c*) About 4 units.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕೆರೆ ರಿಪೇರಿ ಕೆಲಸಕ್ಕೆ 2,800 ರೂಪಾಯಿಗಳಿಗೆ ಅಂದಾಜು ಮಂಜೂರಾಗಿದ್ದು ಕೇವಲ 1,226 ರೂಪಾಯಿ ಖರ್ಚಾಗಿದೆಯೆಂದು ತಿಳಿಸಲಾಗಿದೆ, ಇದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ನದ್ಯದ ಪರಿಸ್ಥಿತಿಯಲ್ಲಿ ಆ ಕೆಲಸವನ್ನು ಮುಂದುವರಿಸುವುದಕ್ಕಿಂತ ಅಷ್ಟೇ ಸಾಕೆಂದು ಅಭಿಪ್ರಾಯ ಪಡಲಾಯಿತು. ಆ ಕೆರೆಯ ಏರಿಯನ್ನು ಎತ್ತರಮಾಡುವುದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕೆಲಸ ತೃಪ್ತಿಕರವಾಗಿ ನಡೆದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ನೋಡಿದ್ದೇನೆ. ಈಗ ಮಾಡಿರುವುದು ತೃಪ್ತಿಕರವಾಗಿದೆ, ಅದರ ಏರಿಯನ್ನು ಎತ್ತರಿಸಬೇಕಾಗಿದೆ.

Disposal of petitions received by Government.

Q.—682. Sri G. PUTTASWAMY (Chikmagalur-Mudigere—Scheduled Castes).—

Will the Government be pleased to State:—

(*a*) the number of petitions of all kinds received by them from every taluk in the year 1952;

(*b*) whether there is a practice to send an acknowledgment for the receipt of such petitions;

(*c*) if so, the number of acknowledgments in respect of petitions received from each taluk;

(*d*) the time ordinarily taken to dispose of those petitions?

A.—Sri Kadidal MANJAPPA (Minister for Revenue and Public Works).—

(*a*) The expense and the labour involved in collection of the information will not be justified or commensurate with the result to be achieved.

(*b*) Acknowledgments are being given in cases where petitions are stamped and presented with the required postage stamps.

(*c*) Please see answer to (*a*).

(*d*) The time taken to dispose of a petition depends upon the nature of the petition.

ಶ್ರೀ ಜಿ. ಪುಟ್ಟಸ್ವಾಮಿ.—ತಾಲ್ಲೂಕು ಆಫೀಸಿನಲ್ಲಿ ರೈತರು ಖುದ್ದಾಗಿ ಅರ್ಜಿ ಕೊಟ್ಟರೂ ಅದಕ್ಕೆ ಎಂಡಾರ್ಸ್‌ಮೆಂಟ್ ಕೊಡುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲಿ ಹೇಳಿದೆ. ವಿಧಾಯಕವಾಗಿರುವ ರೀತಿ ಕೋರ್ಟ್ ಫೀ ಸ್ಟ್ಯಾಂಪು ಜೊತೆಗೆ ಎರಡಾಣೆ ಪೋಸ್ಟೇಜು ಸ್ಟ್ಯಾಂಪು ಹಾಕಿದರೆ ಕೊಡುತ್ತಾರೆ. ದಿನಕ್ಕೆ 200-300 ಅರ್ಜಿಗಳನ್ನು ಕಳುಹಿಸುತ್ತಾರೆ, ಸ್ಟ್ಯಾಂಪು ಹಚ್ಚಿರುವುದಿಲ್ಲ, ಇಷ್ಟಗಲ ಕಾಗದದಲ್ಲಿರುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಖುದ್ದಾಗಿ ಕೊಟ್ಟರೆ?

ಶ್ರೀ ಕಡಿದಾಳ್ ಮಂಜಪ್ಪ.—ಪೋಸ್ಟೇಜು ಸ್ಟ್ಯಾಂಪು ಕೊಟ್ಟರೆ ಆಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಎದುರಿಗೆ ಕೊಟ್ಟರೆ ಅನುಕೂಲವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಎರಡಾಣೆ ಪೋಸ್ಟೇಜ್ ಸ್ಟ್ಯಾಂಪು ಮತ್ತು ಕೋರ್ಟ್‌ಫೀ ಸ್ಟ್ಯಾಂಪ್ ಹಾಕಿರಬೇಕು. The answer in (b) is clear

ಶ್ರೀ ಜಿ. ಪುಟ್ಟಸ್ವಾಮಿ.—ತಾಲ್ಲೂಕು ಆಫೀಸಿಗೆ ಅರ್ಜಿ ಹಾಜರುಮಾಡಿದ್ದು, ಅನೇಕ ಸಂದರ್ಭಗಳಲ್ಲಿ ಅರ್ಜಿ ಬಂದಿಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ಸಂದರ್ಭಗಳಲ್ಲಿ ಎಂಡಾರ್ಸ್‌ಮೆಂಟ್ ಇದ್ದರೆ ನಾವು ಅರ್ಜಿ ಕೊಟ್ಟಿದ್ದೇವೆಂದು ದಾಖಲೆ ತೋರಿಸಲು ಅನುಕೂಲವಾಗುತ್ತದಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿದ ಸಲಹೆಯನ್ನು ಪರಿಶೀಲಿಸುತ್ತೇವೆ, ಖುದ್ದಾಗಿ ಅರ್ಜಿಕೊಟ್ಟರೆ ಅಲ್ಲೇ ಎಂಡಾರ್ಸ್‌ಮೆಂಟ್ ಕೊಡಬಹುದೆ ಎಂಬುದನ್ನು.

ಶ್ರೀ ಬಿ. ಹುಚ್ಚೇಗೌಡ.—(ಸಿ) ಪ್ರಶ್ನೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಬಂದಿರುವ ಅರ್ಜಿಗಳಿಗೆ ಕೊಟ್ಟಿರುವ ಎಂಡಾರ್ಸ್‌ಮೆಂಟ್ ಎಷ್ಟು ಎಂದು ಕೇಳಿರುವುದಕ್ಕೆ ಜವಾಬಿಲ್ಲ; ಕಾರಣವೇನು?